ಅಪ್ರೋಚ್ ರಸ್ತೆಯನ್ನು ನಿರ್ಮಿಸಿದಲ್ಲಿ ಎರಡೂ ಕಡೆಯಲ್ಲಿ ಇರುವ ಜಿಲ್ಲಾ ಮುಖ್ಯ ರಸ್ತೆಗಳಿಗೆ ಸಂಪರ್ಕವೇರ್ಪಡುತ್ತದೆ.

ಸದರಿ ಸೇತುವೆಯ ನಿರ್ಮಾಣಕ್ಕೆ ರೂ.15.00 ಕೋಟಿಗಳ ಅನುದಾನದ ಅವಶ್ಯಕತೆಯಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

801 ಶ್ರೀ ತುಕಾರಾಮ್.ಇ : ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸಹಾಯಕ ತೋಟಗಾರಿಕೆ ನಿರ್ದೇಶಕರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಖಾಲಿ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು) :

ಅ) ಹೌದು.

Yes.

ಆ) ಹಾಲಿ ತೋಟಗಾರಿಕೆ ಇಲಾಖೆಯಲ್ಲಿ 70 ಸಹಾಯಕ ತೋಟಗಾರಿಕೆ ನಿರ್ದೇಶಕರ ಹುದ್ದೆಗಳು ಖಾಲಿ ಇರುತ್ತವೆ. ಇದರಲ್ಲಿ 47 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯ ಸಹಮತಿ ಅಗತ್ಯವಿರುವುದರಿಂದ ಸದರಿ ಇಲಾಖೆಯೊಡನೆ ಹುದ್ದೆ ಭರ್ತಿಗೆ ಸಮಾಲೋಚಿಸಿ ನೇರ ನೇಮಕಾತಿ ಮೂಲಕ 47 ಸಹಾಯಕ ತೋಟಗಾರಿಕೆ ನಿರ್ದೇಶಕ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗುವುದು. ಉಳಿದ 23 ಹುದ್ದೆಗಳನ್ನು ನಿಯೋಜನೆ ಹಾಗೂ ಉನ್ನತ ವ್ಯಾಸಂಗಕ್ಕೆ ತೆರಳಿದ ಅಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.

At present there are 70 vacancies in the cadre of Assistant Director of Horticulture in the department, out of which, 47 posts are required to be filled through direct recruitment which proposal is under consideration of Govt. As filling up of posts requires FD's approval, action will be taken in consultation with FD, to fill up 47 posts of AHD through KPSC by direct recruitment, Re,aomomg 23 posts have been

reserved for officers on deputation and/or have proceeded for higher studies.

186 ಶ್ರೀ ಕುಲಕರ್ಣಿ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ಇತ್ತೀಚೆಗೆ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕೆಲವು ಸಂಘ ಸಂಸ್ಥೆಗಳವರು ನಿರ್ಮಿಸುತ್ತಿರುವುದು ಸರ್ಕಾರ ಗಮನಿಸಿದೆಯೇ;

ಆ) ಇಂಥ ಘಟಕಗಳನ್ನು ಗ್ರಾಮಾಂತರ ಭಾಗದಲ್ಲಿ ಗ್ರಾಮ ಕ್ಕೊಂದರಂತೆ ನಿರ್ಮಿಸಿದಲ್ಲಿ ಸಾರ್ವಜನಿಕರಿಗೆ ಶುದ್ಧ ನೀರು ಕೊಡಬ ಹುದಲ್ಲವೆ;

ಇ) ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮಗಳಾವುವು;

a) Whether it has come to the notice of Government that drinking water Treatment plants for public are installed by some institutions/Societies;

b) Potable drinking water can be given, if such plants are installed in each village of the rural areas;

c) What are the contemplated measures of Government in this regard?

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಗಮನಿಸಿದೆ.

ಆ) ಭೂಮಿಯ ಮೇಲ್ಮೈ ಜಲಮೂಲ ಲಭ್ಯವಿಲ್ಲದ ಹಾಗೂ ಜಲಮೂಲಗಳು ರಾಸಾಯನಿಕವಾಗಿ ಕಲುಷಿತಗೊಂಡಿರುವ ಜನವಸತಿಗಳಲ್ಲಿ ಮಾತ್ರ ಶುದ್ಧ ಕುಡಿಯುವ ನೀರು ಒದಗಿಸಲು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಬಹುದಾಗಿದೆ.

ಇ) ರಾಸಾಯನಿಕ ಕಲುಷಿತಗೊಂಡ, ಜಲಮೂಲಗಳಿರುವ ಗ್ರಾಮಗಳಿಗೆ. ಶುದ್ಧ ನೀರು ಪೂರೈಸಲು 10 ವರ್ಷಗಳ ನಿರ್ವಹಣೆಯೊಂದಿಗೆ ಡಿ–ಫ್ಲೋರಿಡೇಷನ್ ಘಟಕಗಳನ್ನು ಸ್ಥಾಪಿಸಲು ಟೆಂಡರ್ ಕರೆದು 4 ಸರಬರಾಜು ಸಂಸ್ಥೆಗಳನ್ನು ನೋಂದಣಿ ಮಾಡಿಕೊಳ್ಳಲಾಗಿದೆ ಹಾಗೂ ದರ